# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಹೆಚ್ ರಸ್ತೆ, ತುಮಕೂರು -572103

ಸಂಖ್ಯೆ:ತುವಿ:ಶೈವಿ:UG:2024-25/8765 ದಿನಾಂಕ:08.11.2024

## ಸುತ್ತೋಲೆ

ವಿಷಯ:- ಐಚ್ಚಿಕ ಕನ್ನಡ ವಿಷಯದ ಬೋಧನಾವದಿಯನ್ನು ಹೆಚ್ಚಿಸಿರುವ ಕುರಿತು.

ಉಲ್ಲೇಖ:- 1. ತುಮಕೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಾಪಕರ ಒಕ್ಕೂಟ ಇವರ ಮನವಿ ಪತ್ರ ದಿನಾಂಕ:16.10.2024.

2. ಡೀನರನ್ನೊಳಗೊಂಡ ಸಮಿತಿಯ ಸಭಾ ನಿರ್ಣಯ ದಿನಾಂಕ:25.10.2024.

3. ಮಾನ್ಯ ಕುಲಸಚಿವರ ಅನುಮೋದನೆ ದಿನಾಂಕ:04.11.2024

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಡುವ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ತಿಳಿಯಪಡಿಸುವುದೇನೆಂದರೆ, 2024-25ನೇ ಶೈಕ್ಷಣಿಕ ಸಾಲಿನಿಂದ ರಾಜ್ಯ ಶಿಕ್ಷಣ ನೀತಿ ಅನ್ವಯದಂತೆ ಕಲಾ ನಿಕಾಯದ ಪ್ರಮುಖ ವಿಷಯಗಳಿಗೆ ಬೋಧನಾವದಿಯನ್ನು 5ಗಂಟೆಗೆ ನಿಗದಿಪಡಿಸಲಾಗಿರುತ್ತದೆ. ಆದರೆ ಉಲ್ಲೇಖ (01)ರ ಕನ್ನಡ ಅಧ್ಯಾಪಕರ ಮನವಿಯ ಮೇರೆಗೆ ಉಲ್ಲೇಖ (02)ರ ಸಭಾ ನಡಾವಳಿಗಳಂತೆ, 2024-25ನೇ ಶೈಕ್ಷಣಿಕ ಸಾಲಿಗೆ ಮಾತ್ರ 1 ಮತ್ತು 2ನೇ ಸೆಮಿಸ್ಟರ್‌ಗೆ ಐಚ್ಚಿಕ ಕನ್ನಡ ವಿಷಯದ ಬೋಧನಾವದಿಯನ್ನು 5 ಗಂಟೆಯಿಂದ 6 ಗಂಟೆಯವರೆಗೆ ಹೆಚ್ಚಿಸಲಾಗಿರುತ್ತದೆ ಎಂದು ಉಲ್ಲೇಖ (03)ರ ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ತಿಳಿಸಲಾಗಿದೆ.

ಮುಂದುವರೆದಂತೆ Programme Structure ಪರಿಷ್ಕೃತ ಪ್ರತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿದೆ. ಉಳಿದಂತೆ ಯಾವುದೇ ವಿಷಯಗಳ ಬದಲಾವಣೆ ಇರುವುದಿಲ್ಲ.

ಆದೇಶದ ಮೇರೆಗೆ,

ಉಪಕುಲಸಚಿವರು

ಉಪಕುಲಸಚಿವರು
ಶೈಕ್ಷಣಿಕ ವಿಭಾಗ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಗೆ,

ಎಲ್ಲಾ ಪ್ರಾಂಶುಪಾಲರುಗಳು, ಘಟಕ ಹಾಗೂ ಸಂಯೋಜಿತ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

ಪ್ರತಿಗಳು:

1. ಮಾನ್ಯ ಕುಲಸಚಿವರು (ಮೌಲ್ಯಮಾಪನ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು – ಜಾಲತಾಣದಲ್ಲಿ ಪ್ರಕಟಿಸುವುದು ಮತ್ತು ಎಲ್ಲಾ ಕಾಲೇಜುಗಳ ಪ್ರಾಂಶುಪಾಲರಿಗೆ ಇ-ಮೇಲ್ ಕಳುಹಿಸುವುದು.
5. ಕಛೇರಿ ಪ್ರತಿ.